ತಾರೀಖು 3ನೇ ಫೆಬ್ರವರಿ 1903.

ನಂ. ರೆ. 3007—ರೆ. ಫೈ. 25–1901, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ತುಮಕೂರ ಡಿಸ್ಟ್ರಿಕ್ಟು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಮಲ್ದಾರ್ರಾದ ವೆಂ॥ ಎಂ. ಪಿ. ವಿಶ್ವನಾಥರಾಯರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖಿನಾರಭ್ಯ 6 ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಷಿರಸ್ತೆದಾರು ಸದರೀ ಅಮಲ್ದಾರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 3ನೇ ಫೆಬ್ರವರಿ 1903.

ನಂ. ರೆ. 3010, ಸ್ಯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೀಷ್ಯ ರೆಗ್ಯುಲೇಷನಿನ 3 (c) ವ 7ನೇ ಸೆಕ್ಷ್ಯಗಳನುಸರಿಸಿ ಮತ್ತು 1899ನೇ ಜೂ॥ 21ನೇ ಮುಕ್ತುಂ 9366—ರೆ. 4076ನೇ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯನ್ನು ಮತ್ತು ಆ ತರುವಾಯದ 1901ನೇ ಏಪ್ರಿಲ್ ಮುರ್ರ್ತು ಮುಕ್ತುಂ 7801—ರೆ. 2740ನೇ ನಂಬರ್ ಗವರ್ನಮೆಂಟಿನ ಆರ್ಡರನ್ನು ಬದಲಾಯಿಸೋಣದರಲ್ಲಿ ಹಾಸನದ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರರಾದ ವೆಂ॥ ಕೆ. ಚ್ಯಾಂಡಿಯವರು ಮೇಲ್ಕಂಡ ಇಸ್ತಿಹಾರ್ನಾಮೆಯಲ್ಲಿ ವಿವರಿಸಲ್ಪಟ್ಟ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ತಾರೀಖು 3ನೇ ಫೆಬ್ರವರಿ 1903.

ನಂ. ರೆ. 3012, ಸ್ಯ 1388ನೇ ಇಸವಿಯ IVನೇ ನಂಬರ್ ರೆಗ್ಯುಲೇಷ್ಯ ಆದ ಮೈಸೂರು ಲ್ಯಾಂಡ್ ರೆವಿನ್ಯೂ ರೆಗ್ಯುಲೇಷ್ಯ 236ನೇ ಸೆಕ್ಷನಿನ 2ನೇ ಪ್ಯಾರಾ ಅನುಸರಿಸಿ ಆನೆಕಲ್ ತಾಲ್ಲೂಕಿನ ಜಿಗಣಿ ಹೋಬಳಿಗೀಲಿರುವ ಕಾಮಸಂಗುತ್ತಾ ಲಕ್ಷ್ಮೀಪುರ ಮತ್ತು ಹೊಳೆ ಸಂಪಿಗಹಳ್ಳಿ ಗ್ರಾಮಗಳಿಗೆ ಸದರೀ ಕೋಡಿನ VIII ರಿಂದ Xರ ವರಿಗಿನ ಅಧ್ಯಾಯಗಳ ನಿಯಮಗಳನ್ನು ಲಗಾವು ಮಾಡುವ ಬಗ್ಗೆ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮಂತ ಮಹಾರಾಜಾ ಸರಕ್ಕರದವರು ಅಪ್ಪಣೆ ಕೊಡುತ್ತಾರೆ.

ತಾರೀಖು 3ನೇ ಫೆಬ್ರವರಿ 1903.

ನಂ. ರೆ. 3016—ರೆ. ಫೈ. 12–1902, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ಅಸಿಸ್ಟೆಂಟ್ ರಸಾಯನ ಶಾಸ್ತ್ರಜ್ಞರಾದ ವೆಂ॥ ಬಿ. ವಂಕಟರಾಯರಿಗೆ 1903ನೇ ಜನವರಿ 9ನೇ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 3ನೇ ಫೆಬ್ರವರಿ 1903.

ನಂ. ರೆ. 3020, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 165 ಮತ್ತು 220ನೇ ಆರ್ಟಿಕಲ್ ಅನುಸರಿಸಿ ಯಡತೊರೆ ತಾಲ್ಲೂಕಿನ ಅಮಲ್ದಾರ್ರಾದ ವೆಂ॥ ಸಿ. ವಿ. ಕೃಷ್ಣಸ್ವಾಮಿರಾಯರಿಗೆ 1902ನೇ ಏಪ್ರಿಲ್ 25ನೇ ಮುರ್ರ್ತು ರೆ. 1049—ರೆ. ಫೈ. 43–97ನೇ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿರ್ದ ಸ್ವಂತ ಕೆಲಸಗಳ ಮೇಲಣ 6 ತಿಂಗಳುಗಳ ರಜಾ ಫರ್ಲೋ ರಜಾಕ್ಕೆ ಬದಲಾಯಿಸಲ್ಪಟ್ಟಿ ಇನ್ನೂ 6 ತಿಂಗಳು ಇದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತದೆ.

ಹುಕುಂ ಬವೋಜೇಬ್,
ಎಲ್. ಅನಂತಸ್ವಾಮಿರಾವ್,
ಫೈರ್ ಜನರಲ್ ಪ ತೆವಿನ್ಯೂ ಇಲಾಖೆಗಳ ಮೈಸೂರ ಗವರ್ನಮೆಂಟ್ ಸೆಕ್ರಟೆರಿ.

---

## ಜಿಯೋಲಾಜಿಕಲ್ ಇಲಾಖೆ.

### ಇಸ್ತಿಹಾರ್ನಾಮೆ.

ತಾರೀಖು 26ನೇ ಜನವರಿ 1903.

ನಂ. 372—ಎಸ್., ಮೈಸೂರು ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ಮೈಸೂರ ಜಿಯೋಲಾಜಿಕಲ್ ಇಲಾಖೆಯ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾದ ವೆಂ॥ ಎ. ಟಿ. ಸೆಟ್ಟೂರು, ಎಲ್. ಸಿ. ಇ., ಯವರಿಗೆ 1903ನೇ ಜನವರಿ 9ನೇ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬವೋಜೇಬ್,
ಡಬ್ಲ್ಯೂ. ಎಫ್. ಸ್ಮೀತ್,
ಜಿಯೊಲಾಜಿಕಲ್ ಇಲಾಖೆಯ ಗವರ್ನಮೆಂಟ್ ಸೆಕ್ರಟೆರಿ.